C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ - 20 ಪಿ. ಡಬ್ಲ್ಯೂ -13

ದಿನಾಂಕ : 17.02.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಲೋಹಿತ್ . ಕೆ. |
| ತಂದೆಯ ಹೆಸರು | ಲೇಟ್ ಕೃಷ್ಣೇಗೌಡ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗೆಜ್ಜಲಗೆರೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನಗೆ ಚಾಸಾ-1 ರಿಂದ 8, ಆರೋಪಿ ಇಂದು ಕುಮಾರ್, ಪುಟ್ಟ, ಸ್ವರೂಪ್ ಗೊತ್ತು. ನಾನು ಕೆಎ.11.ಇಎಲ್.5557 ಪಲ್ಸರ್ ಬೈಕಿನ ಮಾಲೀಕನಾಗಿರುತ್ತೇನೆ. ಈ ಪ್ರಕರಣದ ಘಟನೆಯ ಹಿಂದಿನ ದಿನ ಆರೋಪಿ ಪುಟ್ಟ ನನ್ನ ಸದರಿ ಬೈಕನ್ನು ನನ್ನಿಂದ ಕೇಳಿ ತೆಗೆದುಕೊಂಡು ಹೋಗಿದ್ದರು. ಆದರೆ ಬೈಕನ್ನು ಆರೋಪಿ ಪುಟ್ಟ ನನಗೆ ವಾಪಸ್ಸು ತಂದು ಕೊಡಲಿಲ್ಲ. ಗಲಾಟೆಯಾದ ನತರ ಸದರಿ ಬೈಕು ಪೊಲೀಸ್ ಠಾಣೆಯಲ್ಲಿ ಎಂದು ನನಗೆ ಗೊತ್ತಾಯಿತು. ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಸದರಿ ಬೈಕನ್ನು ನನ್ನ ವಶಕ್ಕೆ ಪಡೆದುಕೊಂಡೆನು. ಕೊಲೆ ಪ್ರಕರಣದಲ್ಲಿ ಸದರಿ ಬೈಕನ್ನು ಉಪಯೋಗಿಸಿರುತ್ತಾರೆ ಎಂದು ಪೊಲೀಸರು ನನಗೆ ಹೇಳಿದರು. ಹೇಮಂತ ಕುಮಾರ ಮೃತಪಟ್ಟಿರುತ್ತಾನೆ.

ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ. ಸಿ. ಪಿ. ವಕೀಲರಿಂದ :

2. ಆರೋಪಿ ಪುಟ್ಟ ತನ್ನದೇ ಬೈಕನ್ನು ಹೊಂದಿದ್ದರು. ಆದರೆ ನನ್ನಿಂದ ಬೈಕನ್ನು ಪಡೆದ ದಿನ ಆರೋಪಿ ನಡೆದುಕೊಂಡು ಬಂದಿದ್ದು, ನನ್ನಿಂದ ಬೈಕನ್ನು ಕೇಳಿದ್ದರು. ನನ್ನಿಂದ ಬೈಕನ್ನು ಪಡೆದುಕೊಂಡ ಆರೋಪಿ ಪುಟ್ಟ ಆ ದಿನ ಯಾವ ಕಡೆ ಹೋದರು ಎಂದು ನಾನು ಗಮನಿಸಲಿಲ್ಲ. ಆದರೆ ಪೆಟ್ರೋಲ್ ಬಂಕಿಗೆ ಹೋಗುತ್ತೇನೆ ಎಂದು ಹೇಳಿ ಸದರಿ ಆರೋಪಿ ಆ ದಿನ ನನ್ನಿಂದ ಪಡೆದಿದ್ದರು. ಯಾವ ಪೆಟ್ರೋಲ್ ಬಂಕಿಗೆ ಹೋಗುತ್ತೇನೆ ಎಂದು ಆ ದಿನ ಸದರಿ ಆರೋಪಿ ನನಗೆ ಹೇಳಿರಲಿಲ್ಲ. ನನ್ನಿಂದ ಬೈಕನ್ನು ಪಡೆದುಕೊಂಡು ಹೋದ ಸ್ಥಳದಿಂದ ಸದರಿ ಆರೋಪಿಯ ಮನೆ ಸುಮಾರು ಅರ್ಧ ಕಿಮಿ ದೂರದಲ್ಲಿದೆ. ಬೈಕನ್ನು ಸದರಿ ಆರೋಪಿ ನನ್ನಿಂದ ಪಡೆದುಕೊಂಡ ಹೋದಾಗ ಸವಯ ಬೆಳಿಗ್ಗೆ 11.00

ರಿಂದ 11.30 ಆಗಿತ್ತು. ಬೈಕನ್ನು ಏಕೆ ತಂದು ಕೊಟ್ಟಿಲ್ಲ ಎಂದು ನಾನು ಆ ದಿನ ಸದರಿ ಆರೋಪಿಗೆ ಫೋನ್ ಮಾಡಿರಲಿಲ್ಲ. ಘಟನೆಯ ದಿನ ಆರೋಪಿ ಪುಟ್ಟನಿಗೆ ನನ್ನ ಮೇಲ್ಕಂಡ ಬೈಕನ್ನು ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.